“ನನಗೆ ಮಕ್ಕಳು ಬೇಕು. ಅದಕ್ಕಾದರೂ ಮದುವೆಯಾಗಲೇ ಬೇಕು” ಎಂದು ಹಟ ಹಿಡಿದಳು. ಶರಣಾದ ಸುನಿಲ್. ಮತ್ತೊಂದು ಶರತ್ತು ಹಾಕಿದಳು ರಿಂಕೊ. “ನನಗಂತೂ ತಂದೆತಾಯಿ ಬದುಕಿಲ್ಲ. ನಿಮ್ಮ ತಂದೆತಾಯಿಯರ ಮುಂದೆ ಮದುವೆಯಾಗೋಣ, ಯಾವ ವಿಧಿಯ ಮದುವೆ ಆದರೂ ಸರಿ.” ಸುನಿಲನಿಗೆ ಹೆಚ್ಚು ಚರ್ಚೆ ಬೇಡವೆನಿಸಿ ತನ್ನ ತಾಯಿ ರಾಗಿಣಿಗೆ ಇ–ಮೇಲ್ ಕಳುಹಿಸಿದ. “ನಾನು ಜಪಾನೀ ಹುಡುಗಿ ರಿಂಕೊಳನ್ನು ಮದುವೆಯಾಗುತ್ತಿದ್ದೇನೆ. ಮುಂದಿನ ವಾರ ನಾವಿಬ್ಬರೂ ಊರಿಗೆ ಬರುತ್ತಿದ್ದೇವೆ.”

ರಾಗಿಣಿ ಇದಕ್ಕೆ ತಯಾರಿರಲಿಲ್ಲ. ‘ಎರಡು ವರ್ಷ ಇದರ ಸೂಚನೆಯನ್ನೂ ನೀಡದೇ ಈಗ ಏಕಾಏಕಿ ಮದುವೆಯ ಮಾತೆತ್ತಿದ್ದಾನೆ. ಅವಳು ಎಂಥಾ ಹುಡುಗಿಯೋ ಏನೋ; ಯಾರು ಬಲ್ಲರು? ಇವನನ್ನು ಬುಟ್ಟಿಗೆ ಹಾಕಿಕೊಂಡಳು. ಇದಕ್ಕೇ ಇರಬೇಕು ಅವನು ಒದ್ದಿಕೊಂಡು ಜಪಾನಿಗೆ ಹೋಗಿದ್ದು. ಇಲ್ಲಿ ಹುಡುಗಿಯರು ಇರಲಿಲ್ಲವೇ. ಎಂತಹ ರೂಪಸ್ಥೆಯರಿದ್ದರು! ಎಲ್ಲಾ ಬಿಟ್ಟು ಆ ಜಪಾನಿಗೆ ಹೋಗೋದೇನು, ಅಲ್ಲಿ ಯಾವುದೋ ಹುಡುಗೀನ ಕಟ್ಟಿಕೊಳ್ಳೋದೇನು. ಹಣೇಬರಹ’ ಎಂದು ಗೋಳಾಡಿದರು ರಾಗಿಣಿ. ಹೆಚ್ಚು ಮಾತಾಡಲಿಲ್ಲ ಅಗರ್ವಾಲ್. ಹುಡುಗಿಯನ್ನು ನೋಡುವ ಮೊದಲೇ ಅವಳನ್ನು ತಿರಸ್ಕರಿಸಿದ್ದರು ಇವರಿಬ್ಬರೂ.

ತಾನು ಹೇಳಿದ ಹಾಗೆ ಸುನಿಲ್ ರಿಂಕೊಳನ್ನು ಕರೆದುಕೊಂಡು ಮನೆಗೆ ಬಂದ. ಅವರನ್ನು ಎದುರುಗೊಳ್ಳಲು ರಾಗಿಣಿ, ಅಗರ್ವಾಲ್, ಸವಿತಾ ಮತ್ತು ಅವಳ ಗಂಡ ನವೀನ್ ಕಾದಿದ್ದರು. ಸವಿತಾ ಮತ್ತು ರಾಗಿಣಿ ನೋಡಿದ ಕೂಡಲೆ ರಿಂಕೊಳ ಮುಖ ಮೈಕಟ್ಟುಗಳನ್ನು ಅಳೆದು ಹಾಕಿದರು. “ಮುದ್ದಾಗಿ ಚೆನ್ನಾಗಿದ್ದಾಳೆ” ಎಂದು ಉದ್ಗರಿಸಿದಳು ಸವಿತಾ. “ಸುಮ್ಮನಿರೆ ಇವಳ ಬೆಡಗು ಯಾರಿಗೆ ಬೇಕಾಗಿದೆ? ನಮ್ಮ ಜತೆ ಹೊಂದಿಕೊಳ್ಳುವ ಜನಾನಾ ಇವರು? ಬರೀ ಬಿಳೀ ಚಿಟ್ಟೆ ಅಷ್ಟೇ.”

ತಾಯಿಗೆ ಒಂದು ಕಡೆ ಸಂಭ್ರಮ – ಮಗ ದೂರದಿಂದ ಬಂದಿದ್ದಾನೆ. ನಿರೀಕ್ಷಿಸಿದಂತೆ ಇಳಿದು ಹೋಗಿಲ್ಲ. ಬದಲಾಗಿ ಬಹಳ ಗೆಲುವಾಗಿಯೇ ಇದ್ದಾನೆ. ಮತ್ತೊಂದು ಕಡೆ ದುಃಖ. ಇಂತಹ ಸೊಸೆಯಾ ನನಗೆ? ಅವಳಿಗೆ ಹೆಚ್ಚು ಮಾತನಾಡುವ ಧೈರ್ಯವಿರಲಿಲ್ಲ. ಕಾರಣ, ಮಗ ತೋಚಿದ್ದನ್ನು ಹೇಳಿಬಿಡುತ್ತಾನೆ. ಅದನ್ನ ಅನುಭವಿಸುವುದು ಹೇಗೆ? ಆದರೂ ಸುಮ್ಮನಿರುವುದು ಸಾಧ್ಯವೇ? ಕ್ಷೇಮ ಸಮಾಚಾರಗಳನ್ನು ಕೇಳಿದಳು. “ಜಪಾನಿನಲ್ಲಿ ಎಲ್ಲಾ ಸೌಲಭ್ಯಾನೂ ಇದೆಯಾ?” ವಿಚಾರಿಸಿದಳು. ಅವನು ನಗುತ್ತಲೇ ಎಲ್ಲ ಫಸ್ಟ್ ಕ್ಲಾಸ್ ಎಂದ. ಅವಳು “ನನ್ನ ಹೆಸರು ರಿಂಕೊ ಫ್ಯೂಜಿವಾರಾ” ಎಂದಳು.

ರಾಗಿಣಿಗೆ ಸಡಗರ – ಮಗನಿಗೆ ಬಗೆಬಗೆ ಅಡಿಗೆ ಮಾಡಿ ಬಡಿಸಬೇಕು. ಕೋಳಿ, ಕುರಿಗಳ ಜೊತೆಗೆ ಪೂರಿ, ಪರೋಟ, ಫಲಾವ್, ಜಾಮೂನ್ ಎಲ್ಲವೂ ತಯಾರಾದವು. ತಿಂದು ತೇಗಿದ ಮಗ. ರಿಂಕೊ ಮಾತ್ರ ಒಂದೆರಡು  ಚಮಚ ಅನ್ನ, ಒಂದು ಪೂರಿ ತಿಂದು ಸಾಕು ಎನ್ನುತ್ತಿದ್ದಳು. ಇದಕ್ಕೆ ಕಾರಣವೂ ಇತ್ತು. ಅಗರ್ವಾಲ್ ಅವರ ಮನೆಯನ್ನು ನೋಡಿ ಅವಳು ದಂಗಾಗಿದ್ದಳು. ಜಪಾನಿನಲ್ಲಿ ಇಂತಹ ಮನೆಯಲ್ಲಿ ಏನಿಲ್ಲವೆಂದರೂ ಹತ್ತು ಕುಟುಂಬಗಳು ವಾಸಿಸುತ್ತಿದ್ದವು. ಅಲ್ಲದೆ ಮನೆಯ ಮುಂದೆ ಗಿಡಮರಗಳು, ಹಿಂದೆ ಈಜುಗೊಳ ಮತ್ತು ಟೆನಿಸ್ ಕೋರ್ಟು. ಮನೆಯೊಳಗೆ ಮೇಲೆ ಆರು ಬೆಡ್ ರೂಮುಗಳು, ವಿಶಾಲವಾದ ಲೌಂಜ್, ಊಟದಮನೆ ಇತ್ಯಾದಿ. ಇಂತಹ ಮನೆಗೆ ತಾನು ಸೊಸೆಯಾಗುವುದು ನಿಜವೇ? ಅವಳಿಗೆ ದಿಗಿಲಾಯಿತು. ಇವೆಲ್ಲಕ್ಕೂ ಮಿಗಿಲಾಗಿ ಇದೇ ಮೊದಲ ಸಲ ಆ ಮನೆಗೆ ಬಂದಿದ್ದಾಳೆ. ಹೆಚ್ಚು